ಪೆಟಾರಿ, ಕಪಾಟುಗಳಿಗೆ ಮಾವಿನ ಕುರ್ವೆ ಬೀಗದ ನೆಂಟಸ್ತನವಿತ್ತು. ಮಂಜಾಚಾರಿಯ ಅಪ್ಪ ಕಸೆ ಅಂಗಿ ಮತ್ತು ಅಡ್ಡ ಪಂಜಿಯ ನಂದಾಚಾರಿ ಬೀಗಗಳ ಮಾರಾಟಕ್ಕೆ ಬರಿಗಾಲಲ್ಲಿ ಒಂಟಿಯಾಗಿ ಮಲೆನಾಡ ನೀರವ ದಾರಿಗಳಲ್ಲಿ ಸುತ್ತಾಡುತ್ತಿದ್ದ. ಆಲದೆಲೆಯ ಆಕಾರದ ಬೀಗಗಳು ಅವುಗಳ ಭಾರ ಮತ್ತು ಮೊಳೆಗಳಿಂದ ಅಭೇದ್ಯ ಎಂದೆನಿಸುತ್ತಿದ್ದವು. ನಂದಾಚಾರಿ ಸಣಬಿನ ಚೀಲದಿಂದ ಬೇರೆ ಬೇರೆ ಗಾತ್ರದ ಬೀಗಗಳನ್ನು ತೆಗೆದು ಜಗಲಿಯ ಮೇಲೆ ವ್ಯಾಪರಕ್ಕೆ ಇಡುತ್ತಿದ್ದ; ಅವು ಹರಿದಾಡಲು ಸಿದ್ಧವಾಗಿರುವ ಆಮೆ ಮರಿಗಳಂತೆ ಕಾಣುತ್ತಿದ್ದವು. ಚಾವಿ ತೂರಲಿಕ್ಕಿರುವ ತೂತನ್ನು ಮುಚ್ಚುವ ಬಿಲ್ಲೆ ಅದೆಷ್ಟು ಕರಾರುವಾಕ್ಕಾಗಿರುತ್ತಿತ್ತೆಂದರೆ ಹೊರಗಿನಿಂದ ಜೋಡಿಸಿದ್ದು ಗೊತ್ತೇ ಆಗುತ್ತಿರಲಿಲ್ಲ! ಉಗುರಿನಿಂದ ನಾಜೂಕಾಗಿ ಬಿಲ್ಲೆಯನ್ನು ಸರಿಸುವ ಉಪಾಯ ಹೊಳೆಯುತ್ತಿರಲಿಲ್ಲ. ಅದರ ಒಳ ಮಾಟ ಸುಡುಗಾಡು ಸಿದ್ಧನ ಜಾದುವಿನಂತೆ ವಿಸ್ಮಯವಾಗಿರುತ್ತಿತ್ತು. ಅದರ ಅಸಾಧಾರಣ ಗೌಪ್ಯತೆಯ ಎದುರು ತಾಂತ್ರಿಕ ನಿಪುಣರೂ ದಡ್ಡರಾಗಿಬಿಡುತ್ತಿದ್ದರು. ಅರ್ಧ ಚಂದ್ರಾಕೃತಿಯಲ್ಲಿ ಎರಡು ಸಲ ಸುತ್ತುವ ಮೂರು ಕಚ್ಚಿನ ಚಾವಿಯಲ್ಲೂ ನಿಗೂಢತೆ ಇತ್ತು. ನಂದಾಚಾರಿಯನ್ನು ಬಿಟ್ಟು ಬೇರೆ ಯಾರಿಗೂ ಡುಪ್ಲಿಕೇಟ್ ಚಾವಿಯನ್ನು ತಯಾರಿಸಲು ಸಾಧ್ಯವಿರಲಿಲ್ಲ. ಚಾವಿ ಕಳೆದುಕೊಂಡವರು ಬಂದು ಡುಪ್ಲಿಕೇಟ್ ಜತೆ ಹೋಗುವಾಗ ಆಚಾರಿಯೂ ಅವರ ಜೊತೆಯಲ್ಲಿರುತ್ತಿದ್ದ. ಸ್ಟೇಶನ್ನಲ್ಲಿ ಚಾವಿ ಕಳೆದ ಬಗ್ಗೆ ದೂರು ದಾಖಲಿಸಿಯೊ ಪೊಲೀಸರ ಸಮಕ್ಷಮದಲ್ಲೊ ಅವನು ಕಪಾಟು ತೆರೆಯುತ್ತಿದ್ದ. "ಕಪಾಟಿನಲ್ಲಿದ್ದದ್ದು ಕಾಣೆ ಆದ್ರೆ ಕಳು ಆಪಾದನೆ ಈ ಆಚಾರಿ ಮ್ಯಾಲೆ ಬರಬಾರ್ದಲ್ಲ" ಎನ್ನುತ್ತಿದ್ದ. "ಇಂಗ್ಲಿಷ್ ಸಾಲೆಗೆ ಹೋದವರು ನೀವೆಲ್ಲ; ಬೀಗ ತೆಗಿರಿ ನೋಡ್ವಾ" ಎಂದು ಜಂಬದಿಂದ ಅಕ್ಷರಸ್ಥರಾದ ನಮಗೆ ಸವಾಲು ಹಾಕುತ್ತಿದ್ದ. ಬೀಗದ ಮರ್ಮ ತಿಳಿಯದೆ ನಾವು ಮಂಕು ಪೆದ್ದುತನದಲ್ಲಿ ಅಸಹಾಯಕರಾಗಿಬಿಡುತ್ತಿದ್ದೆವು. ಗೊಂದಲದ ಸಂಕೀರ್ಣ ಜಗತ್ತಿನಲ್ಲಿ ಅದರ ಸರಳ ತಾಂತ್ರಿಕತೆಯೇ ಒಗಟಿನಂತಾಗಿತ್ತು. ಭದ್ರ ಕೋಟೆಯ ಮೇಲಿನ ಭರವಸೆಯಷ್ಟೆ ಪೇಟೆಯ ಅಂಗಡಿ ಮಾಲೀಕರು ಬೀಗದ ಕಾವಲುಗಾರಿಕೆಯ ಮೇಲೆ ನಂಬಿಕೆ ಇಟ್ಟಿದ್ದರು. ಮುಷ್ಟಿ ಗಾತ್ರದ ಬೀಗದ ತಾಬೆಗೆ ಇಡೀ ಮನೆಯನ್ನು ಊರವರು ನಿಶ್ಚಿಂತೆಯಿಂದ ಒಪ್ಪಿಸಿ ಹೋಗುತ್ತಿದ್ದರು. ಕಳ್ಳರಿಗೂ ಅದರ ಒಳ ಮರ್ಮ ಒಗಟಾಗಿ ಪರಿಣಮಿಸಿತ್ತು.

ಉರಿ ಬಿಸಿಲನ್ನು ನೆತ್ತಿ ಮೇಲೆ ಹೊತ್ತು ನಾನು ಮಾವಿನ ಕುರ್ವೆ ತಲುಪಿದೆ. ಹೊಳೆಯ ನೀರು ಒಮ್ಮೊಮ್ಮೆ ಕುದಿಯುತ್ತಿರುವಂತೆ ಮತ್ತೊಮ್ಮೆ ಕನ್ನಡಿಯಾಗಿ ಹೊಳೆಯುವಂತೆ ಕಣ್ಣು ಕುಕ್ಕುತ್ತ ತನ್ನ ಮಾಯಾ ರೂಪವನ್ನು ಪ್ರದರ್ಶಿಸುತ್ತಿತ್ತು. ನದಿ ಸೇರಿದ ಸಮುದ್ರದ ದಿಗಂತದಿಂದ ನೀಲಾಕಾಶ ಬಾಗಿ ಇಳಿದಂತೆ ಕಾಣುತ್ತಿತ್ತು. ಇಳಿತದ ಸಮಯವಾಗಿ ನೀರು ಸಮುದ್ರದತ್ತ ಸಳ ಸಳ ವಾಪಸ್ಸು ಹೊರಟಿತ್ತು; ದೋಣಿಯಲ್ಲಿದ್ದ ನನ್ನನ್ನು ಮೀನು ಮತ್ತು ಜವುಳಿನ ವಾಸನೆಯ ಗಾಳಿ ತಂಪಾಗಿ ಆವರಿಸಿತ್ತು. ಅಪರಾತ್ರಿಯಲ್ಲಿ ಕರ್ಕಶ ಕಿರುಚಿ ಕುರ್ವೆಯ ಜನರ ನಿದ್ರೆಗೆಡಿಸುವ ರೇಲ್ವೆಯ ಬೃಹತ್ ಸೇತುವೆ, ತೀರದುದ್ದಕ್ಕೆ ಸಾಲಲ್ಲಿ ನಿಂತು, ನಿಂತಲ್ಲೆ ಖುಷಿಯಿಂದ ಗರಿ ಬಿಚ್ಚಿ ಕುಣಿವ ತೆಂಗಿನ ಮರಗಳು, ಅನತಿ ದೂರದಲ್ಲಿರುವ ಸಣ್ಣ ಸಣ್ಣ ಹಸುರು ದ್ವೀಪಗಳು ನನ್ನೊಂದಿಗೆ ಆಚಾರಿಯ ಮನೆಗೆ ಹೊರಟಂತೆ ಭಾಸವಾಯಿತು. ಸಂತೆ ಮುಗಿಸಿ ಮನೆಗೆ ಮರಳುತ್ತಿರುವ ದೋಣಿಯ ಜನರಲ್ಲಿ ನಂದಾಚಾರಿಯ ಮನೆ ದಾರಿ ವಿಚಾರಿಸಿದೆ. ಎಲೆಗೆ ಸುಣ್ಣ ಒರೆಸುತ್ತ ಒಬ್ಬೊಬ್ಬರೇ ಧಕ್ಕೆ ಇಳಿದ ಮೇಲೆ ಸೀದಾ ಸಾಲೆಗೆ ಹೋಗಿ; ಮುಂದೆ ಚರ್ಚು ಕಾಣ್ತದೆ; ಎಡಕ್ಕೆ ಹೊರಳಬಾರ್ದು ದೇವಸ್ಥಾನಕ್ಕೆ ಹೋಗ್ತೀರಿ; ಬಲಕ್ಕೆ ತಿರುಗಿದರೆ ಹಳೆ ಪೂಲು ಸಿಗ್ತದೆ; ತೆಂಗಿನ